
# ನನ್ನದು ಗಾಂಧೀ ಪಥ



## ಗುರುಲಿಂಗ ಕಾಪಸೆ

ಚಿತ್ರಗಳು: ಬಿ.ಎಂ. ಕೇದಾರನಾಥ

ಸತ್ಯ, ಶ್ರದ್ಧೆ, ನಿಷ್ಠೆ, ಬದ್ಧತೆ, ಪ್ರಾಮಾಣಿಕತೆ – ಇವೆಲ್ಲ ಸತ್ತೇ ಹೋಗಿವೆ ಎಂದು ಎಲ್ಲರೂ ಶರಾ ಬರೆಯುತ್ತಿರುವ ವರ್ತಮಾನದ ಸಂದರ್ಭದಲ್ಲಿ, ಆ ಮೌಲ್ಯಗಳಿಗೂ ಬೆಲೆ ತರುವಂತೆ ಬದುಕುತ್ತಿರುವವರಿದ್ದಾರೆ. ತಮ್ಮ ಇಡೀ ಬದುಕನ್ನು ಸತ್ಯದೊಂದಿಗಿನ ಪ್ರಯೋಗವನ್ನಾಗಿಸಿಕೊಂಡ ಅಂಥವರನ್ನು ನಾವು ಗುರುತಿಸಬೇಕಷ್ಟೇ ಅಲ್ಲ, ಅವರ ನಡೆಯನ್ನು ಅರಿತು ಅನುಸರಿಸಬೇಕಾಗಿಯೂ ಇದೆ. ಅನನ್ಯ ಗುರು, ಪ್ರಾಮಾಣಿಕ ಸಾಹಿತಿ, ಅಂತರಂಗದ ಅನುಭಾವಿ ಹಾಗೂ ಒಬ್ಬ ನಿಜವಾದ ಸಾಧಕ ಗುರುಲಿಂಗ ಕಾಪಸೆ ಅವರು ಅಂಥವರಲ್ಲಿ ಒಬ್ಬರು. ‘ನಾನು ಬದುಕಿನುದ್ದಕ್ಕೂ ಅಭ್ಯಾಸಿಯೇ’ ಎಂದು ಹೇಳುತ್ತಲೇ, ವೃತ್ತಿ, ಪ್ರವೃತ್ತಿ, ನುಡಿ, ನಡೆ, ಅನುಭಾವ, ಅಧ್ಯಾತ್ಮ ಈ ಎಲ್ಲವನ್ನೂ ಒಂದು ನಿರಂತರ ‘ನೋಂಪಿ’ಯನ್ನಾಗಿಸಿಕೊಂಡು ಬದುಕಿದವರು ಅವರು. ಕವಿ ಮಧುರಚೆನ್ನರ ಆತ್ಮದಂತಿರುವ ಗುರುಲಿಂಗ ಕಾಪಸೆ ಅವರು, ಶ್ರೀಮಾತಾರವಿಂದರ ಬೆಳಕಿನ ಪ್ರಭೆಯಲ್ಲಿ ಅನುಭಾವದ ಪಥವನ್ನು ಕಂಡುಕೊಂಡವರು ಮತ್ತು ಆ ಪಥದಲ್ಲಿ ಸಾಗಿದವರು, ಸಾಧನೆ ಮಾಡಿದವರು. ಬೇಂದ್ರೆ, ಕುವೆಂಪು, ಚೆನ್ನವೀರ ಕಣವಿ—ಇವರೆಲ್ಲರ ಉಸಿರು ಮತ್ತು ಅಭಿವ್ಯಕ್ತಿಯ